Furthter to increase the road width of the B.M.Highway within the town limits of Channapatna and Ramanagaram to be fecilitated to easy movement of vehicles and traffic on this road.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಈ ಹೇಳಿಕೆಯನ್ನು ಓದುತ್ತೇನೆ.

ಬೆಂಗಳೂರು-ಮೈಸೂರು ರಸ್ತೆಯು 139ಕಿ.ಮಿ. ಉದ್ದ ಇದ್ದು, ರಾಜ್ಯದ ಅತ್ಯಂತ ಪ್ರಮುಖ ರಾಜ್ಯ ಹೆದ್ದಾರಿಯಾಗಿದೆ. ಈ ರಸ್ತೆಯಲ್ಲಿ ಭಾರಿಸಂಚಾರ ದಟ್ಟಣೆ ಇದ್ದು, ಪ್ರತಿನಿತ್ಯವೂ ಸುತ್ತಮುತ್ತಲಿನ ಪ್ರವಾಸಿ ತಾಣಗಳ ಪ್ರಾಮುಖ್ಯತೆಯಿಂದಾಗಿ ಸಂಚಾರವು ಹೆಚ್ಚಾಗುತ್ತಲೇ ಇದೆ. ವಾಹನ ಸಂಚಾರಕ್ಕೆ ಅನುಕೂಲವಾಗುವಂತೆ ರಸ್ತೆಯನ್ನು ಸೂಕ್ತವಾಗಿ ನಿರ್ವಹಣೆಯನ್ನು ಮಾಡುವ ಮತ್ತು ಅಭಿವೃದ್ಧಿಪಡಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಬೆಂಗಳೂರಿನಿಂದ ಚನ್ನಪಟ್ಟಣದವರೆಗೆ ಇರುವ ರಸ್ತೆಯ ಭಾಗದಲ್ಲಿ ಸಿವಿಲ್ ಕಾಮಗಾರಿಗಳಾದ, ಅಪಾಯಕಾರಿ ತಿರುವುಗಳನ್ನು ನೇರಮಾಡುವುದು. ದುರ್ಬಲ ಸೇತುವೆಗಳನ್ನು ಪುನರ್ ನಿರ್ಮಿಸುವುದು ಮುಂತಾದ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದ್ದು, 1990-91ನೇ ಸಾಲಿನಲ್ಲಿ ರಸ್ತೆಯ ನಿರ್ವಹಣೆಯನ್ನು ಹಾಗೂ ಕಿ.ಮೀ. 19.20.27.39 ಮತ್ತು 42ನೇ ಕಿ.ಮಿ.ನಲ್ಲಿ ಬರುವ ಅತ್ಯಂತ ಅಪಾಯಕಾರಿಯಾದ ತಿರುವುಗಳನ್ನು ನೇರ ಮಾಡುವುದು, ಕೆಲವು ದುರ್ಬಲ ಸೇತುವೆಗಳನ್ನು ಅಭಿವೃದ್ಧಿಪಡಿಸುವುದು, ರಸ್ತೆಯ ಕೆಟ್ಟುಹೋದ ಭಾಗಗಳಿಗೆ ಜಲ್ಲೆ ಹರಡಿ ಮತ್ತೆ ಮರು ಡಾಂಬರು ಮಾಡುವುದು ಮುಂತಾದ ಕಾಮಗಾರಿಗಳನ್ನು 45ಲಕ್ಷ ರೂ.ಗಳ ವೆಚ್ಚದಲ್ಲಿ ಮಾಡಲಾಗಿದೆ. ರಸ್ತೆಯು ದ್ವಿಪಥ ರಸ್ತೆಯಾಗಿದ್ದು 7 ಮಿಟರ್ ಅಗಲ ಇದೆ. ಚನ್ನಪಟ್ಟಣ ಮತ್ತು ರಾಮನಗರಂ ಪ್ರದೇಶಗಳಲ್ಲಿ ಬರುವ ರಸ್ತೆಯ ಭಾಗಗಳ ನಿರ್ವಹಣೆಯನ್ನು ಮಾಡುತ್ತಿದ್ದು ಇದನ್ನು ಮತ್ತೆ ಅಗಲಗೊಳಿಸುವ ಪ್ರಸ್ತಾವನೆಯು ಸಧ್ಯದಲ್ಲಿ ಇರುವುದಿಲ್ಲ. ಬೆಂಗಳೂರು-ಮೈಸೂರು ಮಧ್ಯೆ ಇರುವ ಸಂಚಾರ ದಟ್ಟಣೆಯನ್ನು ಅವಲೋಕಿಸಿ, ಒಂದು ಪ್ರತ್ಯೇಕ ಎಕ್ಸಪ್ರೆಸ್ ಹೆದ್ದಾರಿಯನ್ನು ಮಾಡುವ ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

Mr SPEAKER . I have one suggestion to make with reference to National High ways as well as State High Ways as well as State High Ways and road humps. Why don't you get it painted with metalic road so that we will come to know from a reasonably less distance and control our speed. For having spent Rs. 45 lakhs and if you spend another one lakh of ruppes what do you lose? You take action for painting vertical lines in red colour at the point of road humps. I dont't know why the PWD is callous about some of the basic things in road management.

SRI M. VEERAPPA MOLLY : We will give suitable direction to the concerned in this regard.

MR. SPEAKER : Thank you very much.

(17) ಮಂಡ್ಯ ನಗರಕ್ಕೆ ರಸ್ತೆ ನಿರ್ಮಾಣ ಮತ್ತು ಒಳಚರಂಡಿ ಸೌಕರ್ಯಗಳನ್ನು ಒದಗಿಸುವುದು.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರವು ಸುಮಾರು ಒಂದೂವರೆ ಲಕ್ಷ ಪ್ರಜಾಸಂಖ್ಯೆಯನ್ನು ಹೊಂದಿದೆ. ಮಂಡ್ಯ ನಗರವು ಈ ಹಿಂದೆ ಪಟ್ಟಣ ಪ್ರದೇಶವಾಗಿದೆ. ಮಂಡ್ಯದ ಸುತ್ತಮುತ್ತಲಿನ ಗ್ರಾಮಗಳು ಪಟ್ಟಣದ ವ್ಯಾಪ್ತಿಗೆ ಬಂದಿದ್ದು, ಈಗ ನಗರಪ್ರದೇಶವಾಗಿದೆ, ಮಂಡ್ಯ ನಗರಸಭೆಯಾಗಿದೆ. ಈ ನಗರದ ಬಡಾವಣೆಗಳಾದ ಬಂದೀಗೌಡ ಲೇಔಟ್, ಚಾಮುಂಡೇಶ್ವರಿ ನಗರ, ಮರಿಗೌಡ ಬಡಾವಣೆ, ಕಲ್ಲಹಳ್ಳಿಯ ವಿಶ್ವೇಶ್ವರಯ್ಯ ಬಡಾವಣೆಗಳಲ್ಲಿ ರಸ್ತೆಗಳಿಗೆ ಡಾಂಬರು ಹಾಕಿರುವುದಿಲ್ಲ. ಕುಡಿಯುವ ನೀರಿನ ಸೌಲಭ್ಯವೂ ಇಲ್ಲ. ಈ ಮೇಲೆ ಹೇಳಿದ ಬಡಾವಣೆಗಳೇ ಅಲ್ಲದೆ, ಕಲ್ಲಹಳ್ಳಿ, ಹೊಸಹಳ್ಳಿ, ತಾವರೆಗೆರೆ, ಗಾಂಧೀನಗರದ ಕೆಲವು ಭಾಗ ಮತ್ತು ಅರ್ಕೇಶ್ವರ ನಗರ, ಈ ಎಲ್ಲಾ ಬಡಾವಣೆಗಳು ಒಳಚರಂಡಿ ಸೌಕರ್ಯವನ್ನು ಹೊಂದಿಲ್ಲ. ರಸ್ತೆಗಳಿಗೆ ಡಾಂಬರು ಹಾಕುವುದು, ಕುಡಿಯುವ ನೀರಿನ ಹಾಗೂ ಒಳಚರಂಡಿ ಸೌಲಭ್ಯಗಳನ್ನು ಒದಗಿಸುವ ಕಾರ್ಯ ಅತಿ ಅವಶ್ಯವಾದುದರಿಂದ ಈ ಕಾರ್ಯಗಳನ್ನು ಜರೂರಾಗಿ ಕ್ರಮಕೈಗೊಳ್ಳಬೇಕಾದ ಪರಿಸ್ಥಿತಿ ಇದ್ದು, ಸಾರ್ವಜನಿಕರಿಂದ ಇದರ ಬಗ್ಗೆ ಒತ್ತಾಯವೂ ಇದೆ. ಮಂಡ್ಯ ನಗರಸಭೆಗೆ ರಸ್ತೆ ನಿರ್ಮಾಣ ಕಾರ್ಯಕ್ಕೆ ವಿಶೇಷ ಅನುದಾನ ಕೊಡುವ ಮೂಲಕ ಈ ರಸ್ತೆ ಕಾರ್ಯಕೈಗೊಳ್ಳಲು ಅನುಕೂಲ ಮಾಡಿಕೊಡಬೇಕೆಂದು, ಈ ಕಾರ್ಯ ಕೈಗೊಳ್ಳಲು ನಗರಸಭೆಗೆ ಆದೇಶಿಸಬೇಕೆಂದು ಹಾಗೂ ಕುಡಿಯುವ ನೀರಿನ 2ನೇ ಹಂತದ ಯೋಜನೆಯನ್ನು ಅನುಷ್ಠಾನಗೊಳಿಸಬೇಕೆಂದೂ ಮತ್ತು ಒಳಚರಂಡಿ ಯೋಜನೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಮಂತ್ರಿಯವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಓದುತ್ತೇನೆ.

ಮಂಡ್ಯ ನಗರಕ್ಕೆ ಪ್ರಸ್ತುತವಾಗಿ ನೀರು ಸರಬರಾಜನ್ನು ಕಾವೇರಿ ನದಿಯಿಂದ ಪೂರೈಸಲಾಗುತ್ತಿದೆ. ಹಾಲಿ ಇರುವ ಯೋಜನೆಯ ಅಂದಾಜು ವೆಚ್ಚ ರೂ. 115 ಲಕ್ಷಗಳಿಗೆ 1971ರಲ್ಲಿ ಸರ್ಕಾರದಿಂದ ಮಂಜೂರಾತಿ ದೊರೆತಿದೆ. ಈ ಯೋಜನೆಯನ್ನು 1991ನೇ ಸಾಲಿನಲ್ಲಿ ಇರಬಹುದಾದ 1,20,000 ಜನಸಂಖ್ಯೆ ಎಂದು ಪರಿಗಣಿಸಿ ತಲಾ 25 ಗ್ಯಾಲನ್‌ನಷ್ಟು ನೀರು ಸರಬರಾಜು ಮಾಡಲು ವಿನ್ಯಾಸಿಸಲಾಗಿದೆ ಈ ಯೋಜನೆಯನ್ನು 1985ರಲ್ಲಿ ಕಾರ್ಯಗತಗೊಳಿಸಲಾಯಿತು. ಪ್ರಸ್ತುತವಾಗಿ ತಲಾ ದಿನಂಪ್ರತಿ 80 ಲೀಟರ್ ಪ್ರಮಾಣದಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ.

ಮಂಡ್ಯ ನಗರವು ಶೀಘ್ರಗತಿಯಲ್ಲಿ ಬೆಳೆಯುತ್ತಿದ್ದು, ಹಾಲಿ ಜನತೆಗೆ ದಿನಂಪ್ರತಿ 15 ಗ್ಯಾಲನ್ ನೀರನ್ನು ಮಾತ್ರ ಸರಬರಾಜು ಮಾಡಲಾಗುತ್ತಿದೆ. ಹಾಗೂ ಮಂಡ್ಯ ನಗರಕ್ಕೆ ಒಳಚರಂಡಿ ಯೋಜನೆಯನ್ನು ಸಹ ಅಳವಡಿಸಲಾಗಿದೆ. ಈ ಒಳಚರಂಡಿ ಯೋಜನೆಯು ಸರಿಯಾಗಿ ಕಾರ್ಯ ನಿರ್ವಹಿಸಲು ದಿನಂಪ್ರತಿ ತಲಾ 25 ಗ್ಯಾಲನ್‌ನಷ್ಟು ನೀರು ಬೇಕಾಗುತ್ತದೆ. ಆದುದರಿಂದ ಸುಧಾರಿತ ಸಮಗ್ರ ಆ ನೀರು ಸರಬರಾಜು ಯೋಜನೆಯನ್ನು ತಯಾರಿಸಲು ಅನಿವಾರ್ಯವಾಯಿತು.

ಅದರಂತೆ, ರೂ. 1360.00 ಲಕ್ಷಗಳಿಗೆ ಎರಡನೇ ಹಂತದ ನೀರು ಸರಬರಾಜು ಯೋಜನೆಯನ್ನು ಕಾವೇರಿ ನದಿಯನ್ನ ಮೂಲವಾಗಿಟ್ಟುಕೊಂಡು ತಯಾರಿಸಲಾಗಿದೆ. ಈ ಯೋಜನೆಯಲ್ಲಿ ಕ್ರಿ.ಶ. 2021ರಲ್ಲಿ ಇರಬಹುದಾದ 3 ಲಕ್ಷ ಸಂಖ್ಯೆಗೆ ತಲಾ ದಿನಂಪ್ರತಿ 135 ಲೀಟರ್ ಪ್ರಮಾಣದಲ್ಲಿ ನೀರು ಸರಬರಾಜು ಮಾಡಲು ಯೋಜಿಸಲಾಗಿದೆ.

ಈ ಯೋಜನೆಯನ್ನು ಹುಡ್ಕೊ ಸಂಸ್ಥೆಯ ಅರ್ಥಿಕ ನೆರವು ಸರ್ಕಾರದ ಸಾಲ ಕೊಡುಗೆ ಮತ್ತು ನಗರ ಸಭೆಯ ವಂತಿಗೆಯಿಂದ ಈ ಯೋಜನೆಯನ್ನು

ತೆಗೆದುಕೊಳ್ಳಲಾಗುವುದು. ಈ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲು ಸರ್ಕಾರದ ಪರಿಶೀಲನೆಯಲ್ಲಿದೆ.

ಮಂಡ್ಯ ನಗರ ಪುರಸಭೆಗೆ ರಸ್ತೆ ನಿರ್ಮಾಣ ಮುಂತಾದ ಅಭಿವೃದ್ಧಿ ಕಾರ್ಯಕ್ಕೆ ವಿವೇಚನಾತ್ಮಕ ಅನುದಾನದಿಂದ ಹಣ ಬಿಡುಗಡೆ ಮಾಡಲು ಸರ್ಕಾರದ ಪರಿಶೀಲನೆಯಲ್ಲಿದೆ.

18) ಕೊಪ್ಪಳವನ್ನು ಜಿಲ್ಲಾ ಕೇಂದ್ರ ಮಾಡಬೇಕೆಂದು ಸರದಿ ಉಪವಾಸ ಸತ್ಯಾಗ್ರಹ ಮಾಡುತ್ತಿರುವ ಬಗ್ಗೆ.

ಶ್ರೀ ದಿವಟರ ಮಲ್ಲಿಕಾರ್ಜುನ ಬಸಪ್ಪ (ಕೊಪ್ಪಳ) : ಮಾನ್ಯ ಅಧ್ಯಕ್ಷರೇ, ಕಳೆದ 25 ದಿವಸಗಳಿಂದ ಕೊಪ್ಪಳದಲ್ಲಿ ಸರದಿ ಉಪವಾಸ ಸತ್ಯಾಗ್ರಹ ಕೊಪ್ಪಳವನ್ನು ಜಿಲ್ಲಾಕೇಂದ್ರ ಮಾಡಬೇಕೆಂದು ಒತ್ತಾಯಿಸಲು ನಡೆದಿದೆ. ಸಚಿವ ಸಂಪುಟದ ಉಪ ಸಮಿತಿ 4 ಜಿಲ್ಲೆಗಳನ್ನು ಮಾಡಲು ಶಿಫಾರಸ್ಸು ಮಾಡಿರುವುದಾಗಿ ಉಳಿದಿದೆ. ಈ ನಾಲ್ಕರಲ್ಲಿ ಕೊಪ್ಪಳ ಇಲ್ಲದೆ ಇರುವುದಕ್ಕೆ ವಿವಂಚನೆಗೊಂಡ ಈ ಭಾಗದ ಸರ್ವಪಕ್ಷಗಳ ಮುಖಂಡರು ವಿವಿಧ ಸಂಘಸಂಸ್ಥೆಗಳು ಹಾಗೂ ಸಾಹಿತಿ ಕಲಾವಿದರ ಬಳಗ ಸರ್ಕಾರದ ಗಮನ ಸೆಳೆಯಲು ಸರದಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ್ದಾರೆ. ಇದುವರೆಗೆ ಈ ನ್ಯಾಯಯುತ ಹೋರಾಟಕ್ಕೆ ಸರ್ಕಾರದ ಯಾವುದೇ ಪ್ರಾತಿನಿಧ್ಯ ಗಮನಹರಿಸದೇ ಇರುವುದನ್ನು ಪ್ರತಿಭಟಿಸಿ, ಎರಡನೇ ಹಂತದ ಹೋರಾಟವಾಗಿ ಕರನಿರಾಕರಣೆ. ಆಫೀಸುಗಳ ಮುಂದೆ ಪಿಕೆಟಿಂಗ್ ಮುಂತಾದ ಕಾರ್ಯಕ್ರಮಗಳನ್ನು ಕೈಗೊಳ್ಳುವವರಿದ್ದಾರೆ. ಮೂರನೆಯ ಹಾಗೂ ಕೊನೆಯ ಹಂತದ ಹೋರಾಟವಾಗಿ ಮುಂಬರುವ ಲೋಕಸಭಾ ಚುನಾವಣೆಗಳನ್ನು ಬಹಿಷ್ಕರಿಸುವುದು. ಕಾರಣ ಈ ಭಾಗದ ಪ್ರತಿನಿಧಿಯಾಗಿ ಜನರ ನ್ಯಾಯಯುತ ಹೋರಾಟ ಮನ್ನಿಸುವುದು ಸರ್ಕಾರದ ಅದ್ಯ ಕರ್ತವ್ಯವಾಗಿದೆ ಎಂದು ನೆನಪಿಸುತ್ತಾ, ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುವುದೇನೆಂದರೆ, ಗದ್ದಿಗೌಡರ ಸಮಿತಿಯ ವರದಿ ಸಂಪೂರ್ಣವಾಗಿ ಜಾರಿಗೆ ಬರಬೇಕು. ಅದರಲ್ಲಿ ಯಾವುದೇ ಹೆಚ್ಚು ಕಡಿಮೆ ಆಗಕೂಡದು. ಎರಡನೆಯದಾಗಿ, ಮೊದಲ ಕಂತಿನಲ್ಲೇ ಇತರ ಜಿಲ್ಲೆಗಳ ಜೊತೆಗೆ ಕೊಪ್ಪಳ ಜಿಲ್ಲೆ ಅಸ್ತಿತ್ವದಲ್ಲಿ ಬರಬೇಕು. ಇಷ್ಟು ಭರವಸೆಯನ್ನು ಸರ್ಕಾರ ನೀಡುವುದಾದರೆ, ಜಿಲ್ಲಾ ರಚನಾ ಸಮಿತಿಯವರು ನಡೆಸಿರುವ ಉಪವಾಸ ಸತ್ಯಾಗ್ರಹ ಮುಂತಾದ ವಿಧಾನಗಳನ್ನು ಕೈಬಿಡಲು ಮನವೊಲಿಸುವ ಪ್ರಯತ್ನ ಮಾಡುವುದಾಗಿ ಹೇಳುತ್ತಾ, ಈ ಬಗ್ಗೆ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಬೇಕೆಂದು ಮಾನ್ಯ ಕಂದಾಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗಾಗಲೇ ಸ್ಪಷ್ಟಪಡಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಈ ವಿಷಯ ಸಾಕಷ್ಟು ಚರ್ಚೆ ನಡೆದು; ಅದಕ್ಕೆ ಸ್ಪಷ್ಟವಾದ ಸ್ಟೇಟ್‌ಮೆಂಟ್ ಮಾಡಲಾಗಿದೆ.

ಶ್ರೀ ಬಿ. ಮಲ್ಲಿಕಾರ್ಜುನ ಡಿವಟರ್ : ತಾವು ಈಗ ಕೊಟ್ಟಿರತಕ್ಕ ಲಿಖಿತ ಉತ್ತರವೂ ನನಗೆ ಬಂದಿದೆ.

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ. ಮರಿಯಪ್ಪನವರು ದಿನಾಂಕ 19.2.1919ರಂದು ಮಾನ್ಯ ಕಾರ್ಯದರ್ಶಿ ಮತ್ತು ಆಯುಕ್ತರು - 2 ಇವರಿಗೆ ಕೊಪ್ಪಳ ತಾಲ್ಲೂಕಿಗೆ ಸಂಬಂಧಪಟ್ಟ ಗ್ರಾಮಸ್ಥರು ಕೊಟ್ಟಿರುವ ಮನವಿಯನ್ನು ಸಲ್ಲಿಸಿರುತ್ತಾರೆ. ಈ ಮನವಿಯಲ್ಲಿ ಜಿಲ್ಲಾ ಕೇಂದ್ರವಾಗಲಿರುವ ಕೊಪ್ಪಳ ನಗರವು ಐತಿಹಾಸಿಕ, ಪೌರಾಣಿಕ, ಸ್ವತಂತ್ರ ಹೋರಾಟದಲ್ಲಿ ಅಗ್ರಸ್ಥಾನ ಪಡೆದಿದ್ದು, ರೈಲ್ವೆ ಸ್ಟೇಷನ್, ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳ ಸಂಪರ್ಕ ಹೊಂದಿರುವುದಲ್ಲದೆ ಅನೇಕ ವಿಸ್ತರಿಸಬೇಕಾದ ಕಛೇರಿಗಳಿಗೆ ಹಾಗೂ ವಸತಿಗಳಿಗಾಗಿ ಭೂಮಿ ಲಭ್ಯವಿರುತ್ತದೆಂದು ತಿಳಿಸಿ ಜಿಲ್ಲಾ ಕೇಂದ್ರ ರಾಯಚೂರು ಜಿಲ್ಲೆಯ ನಗರಗಳು ಅತಿ ದೂರವಾಗಿದ್ದು